State Archives
Departmental Library)
Accession No. (B) 4842

5-30 P.M.

Mr. SPEAKER.—The question is :

"that we, the members of the Mysore Legislative Assembly assembled in this Session beg leave to thank the Governor for the Address delivered to the members of the Legislature on 28th January 1966."

Sri K. P. REVANASIDDAPPA.—I press for a division.

Mr. SPEAKER.—The Division bell will ring. (The bell rang for 2 minutes).

Mr. SPEAKER.—I will again put the motion to the vote of the House. The question is :

"that we, the members of the Mysore Legislative Assembly assembled in this Session beg leave to thank the Governor for the Address delivered to the members of the Legislature on 28th January 1966."

The motion was adopted.

MYSORE SALES TAX (AMENDMENT) BILL, 1966.

Motion to Consider.

Sri RAMAKRISHNA HEGDE (Minister for Finance).—I beg to move :

"That the Mysore Sales Tax (Amendment) Bill, 1966, be taken into consideration".

Mr. SPEAKER.—Motion moved :

That the Mysore Sales Tax (Amendment) Bill, 1966, be taken into consideration."

† RAMAKRISHNA HEGDE.—Sir, this Bill has been brought forward with two important objects, namely one to augment the resources of the State to enable the Government to undertake various development schemes included in the 4th plan and secondly to remove certain lacunae that exist in the present Act. I would like to refer only to those points which are very important It has been proposed to increase the rate of sales tax on turnover from 2% to 3% and also in respect of certain items certain increase has been proposed as detailed in the Bill. It has also been proposed to raise the limit of exemption of Rs. 7,500 to Rs. 10,000 so that small dealers, petty shopkeepers, etc. are kept out of the purview of this legislation.

Another important point in this Bill is to provide a rebate of 1 per cent in respect of certain luxury goods on production of proof that Central sales tax has been paid thereon. This is necessary because if the incidence of the tax is higher than in the neighbouring States, there

(SRI RAMAKRISHNA HEGDE)

is likelihood of diversion of trade. Therefore, as it has been done in the Andhra Act, we also propose to incorporate that provision in this Bill.

I might incidentally mention here that a thorough examination of the structure and tax incidence of the various sales tax legislations in the four Southern States was made recently by the representatives of these four States under the Chairmanship of a representative of the Central Finance Ministry. There are certain disparities in the rates of sales tax in these four States. Our experience is that unless there is some sort of uniformity, trade is bound to divert from one State to the other affecting the trade position in the State from which the trade is diverted. Therefore after careful examination and also looking to the need to raise fresh resources for the Fourth Plan some tentative agreement was reached in this Committee. As Hon'ble Members are aware, Madras State has already amended the Sales Tax Act there and the Governments of Andhra Pradesh and Kerala have also taken up suitable measures. This Bill is in consonance with the agreement reached in the Committee that I have referred to and the increase that I have proposed in this Bill is also in conformity with the increase affected in the neighbouring State. I do not think it necessary to elaborate further. This is a very short Bill and on the eve of the embarking on the Fourth Plan I seek the co-operation from all sections in this House and I commend this Bill for their acceptance.

Sri S. SIVAPPA.—May I know the anticipated revenue by the proposed amendment?

Sri RAMAKRISHNA HEGDE.—I am sorry. Unfortunately I omitted to mention this. The expected revenue from this measure is something between, Rs. 3½ to 4 crores.

†ಶ್ರೀ ಕೆ. ಪಿ. ಗದಗ್.—ಅಧ್ಯಕ್ಷರೇ, ಈಗ ಮಾನ್ಯ ಅರ್ಥ ಸಚಿವರು ಮಂಡಿಸಿದ 1966ನೇ ಸಾಲಿನ ಮೈಸೂರು ಸೇಲ್ಸ್‌ಟ್ಯಾಕ್ಸ್ ಅಮೆಂಡ್‌ಮೆಂಟ್ ಬಿಲ್ಲಿಗೆ ನಾನು ಒಂದು ಕಾರಣದ ಮೂಲಕ ಹೃತ್ಪೂರ್ವಕವಾದ ಬೆಂಬಲವನ್ನು ಕೊಡಲೇಬೇಕಾಗಿದೆ. ಬಿಲ್ಲಿನ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಗಳನ್ನು ಈಗಾಗಲೇ ಮಾನ್ಯಮಂತ್ರಿಗಳು ಪ್ರಸ್ತಾಪಿಸಿದ್ದಾರೆ. ಮಾನ್ಯ ಸದಸ್ಯರಿಗೆ ಗೊತ್ತಾದ ಹಾಗೆ, ಈ ಪಂಚವಾರ್ಷಿಕ ಯೋಜನೆಯ ಅನೇಕ ಡೆವಲಪ್ ಯೋಜನೆಗಳಿಗೆ ಹಣದ ಕೊರತೆ ಇದ್ದುದು ಗೊತ್ತಿದೆ. ಯಾವುದೇ ಕಾರಣದಿಂದ ಅವನ್ನು ವಿಳಂಬ ಮಾಡುವುದು ಅಗಲ ತಟಸ್ಥ ಇಡುವುದು ಅಗಲ, ಬರುವಂತಿಲ್ಲ. ನಾವು ಅಥವಾ ಸರ್ಕಾರದವರು ಅವನ್ನು ಪೂರೈಸಲೇಬೇಕು. ಕೆಲವು ಮಾನ್ಯ ಸದಸ್ಯರು ಇವನ್ನು ತಟಸ್ಥ ಇಡಬೇಕು ಎಂದು ಹೇಳಬಹುದು. ಇದು ಅಪಾಯಕಾರಕ ಎಂದು ಹೇಳದೆ ಗತ್ಯಂತರವಿಲ್ಲ. ಏತಕ್ಕೆ ಅಪಾಯ ಕಾರಕ ಎಂದು ಹೇಳುತ್ತೇನೆ ಎಂದರೆ, ಯಾವ ಯೋಜನೆ ಅಪೂರ್ತಿ ಇಕ್ಕು ಎಂದರೆ, ಅದರಿಂದ ಏನು ಲಾಭ ಉಪಯುಕ್ತತೆ ಆಗುವುದು ಇದೆ ಅದು ತಡವಾಗುತ್ತದೆ. ಅದೂ ಅಲ್ಲದೆ, ದೇಶದೊಳಗೆ, ಒಂದು ಪ್ರಾಂತದೊಳಗೆ, ಏನು ಒಂದು ಟೆಂಪೋ ಇದೆ, ಅದು ಕುಗ್ಗುತ್ತದೆ. ಈ ಕಾರಣದ ಮೂಲಕ, ಯೋಜನೆಗಳು ಏನು ಇವೆ, ಈ ಪಂಚವಾರ್ಷಿಕ ಯೋಜನೆಯ ಕೆಲಸಗಳು ತಟಸ್ಥ ಇಡಬೇಕು ಎನ್ನುವುದು ಬಹಳ ಅಪಾಯ ಕಾರಕ; ಅವು ಆಗಲೇ ಬೇಕು. ಮಾನ್ಯ ಸದಸ್ಯರು ಯೋಜನೆಗಳು ಆಗಬೇಕು ಎಂದು ಕೇಳುತ್ತಾರೆ, ಆದರೆ ಟ್ಯಾಕ್ಸೇಷನ್ ಮಾಡುವುದು ಬೇಡ ಎಂದರೆ ಹೇಗೆ? ನಾವು ಸೂಕ್ತ ಸಲಹೆ ಹೇಳಬೇಕು. ಈ ಯೋಜನೆಗಳು ಬೇಕು ಎನ್ನುವ ಬಗ್ಗೆ ಯಾರ ಭಿನ್ನಾಭಿಪ್ರಾಯವಿಲ್ಲ. ಯೋಜನೆಗೆ ತಗಲುವ ವೆಚ್ಚವನ್ನು ಯಾವ ರೀತಿಯಿಂದ ಪೂರೈಸಬೇಕು ಎಂದು ಹೇಳಬೇಕು. ಇವೊತ್ತಿನ ದಿವಸ

ಮಾನ್ಯ ಕಡಿದಾಳ್ ಮಂಜಪ್ಪನವರು ಹೇಳಿದರು ಉಳಿತಾಯ ಮಾಡಲ ಎಂದು, ಉಳಿತಾಯ ಮಾಡುವುದು ತಿನು ಎಂದು ಹೇಳಲ. ನಾನು ಹೇಳುವುದು ಇಷ್ಟೆ. ಮೊದಲನೆಯ ನೂಚನೆ ಖರ್ಚಾಗುವ ಹಣವನ್ನು ನಾವು ಯಾವ ರೀತಿಯಿಂದಲಾದರೂ ನಂದಾಯಿಸಬೇಕು. ಎರಡನೆಯ ನೂಚನೆ ಇಲ್ಲದಲ್ಲಿ ಟ್ಯಾಕ್ಸೇಷನ್ ಹಾಕಲೇ ಬೇಕಾಗುತ್ತದೆ. ಈ ಕಾರಣದಿಂದ ತಂದಿರುವಂಥ ಈ ಬಿಲ್ಲನ್ನು ಅನುಮೋದಿಸಿ ಬಿಲ್ಲಿನಲ್ಲಿ ಅಡಕವಾಗಿರುವ ಕೆಲವು ಏನು ನೂಚನೆಗಳಿವೆಯೋ ಅವುಗಳ ಬಗ್ಗೆ ಸ್ವಲ್ಪ ಪ್ರಸ್ತಾಪಿಸಿ ನನ್ನ ಅಭಿಪ್ರಾಯಗಳನ್ನು ಈ ಮೂಲಕ ಹೇಳಬಯಸುತ್ತೇನೆ.

ಈ ಬಿಲ್ಲಿನಲ್ಲಿ ಮೊದಲನೆಯದಾಗಿ ಏನು ಇದೆ ಎಂದರೆ, ಯಾವುದಾದರೂ ಒಂದು ಆರ್ಟಿಕಲ್ ಒಂದು ಷೆಡ್ಯೂಲ್‌ನೊಳಗೆ ಬರದೇ ಇದ್ದರೆ, ಎಕ್ಸೆಂಟೆಡ್ ಆರ್ಟಿಕಲ್‌ನೊಳಗೆ ಇರದೇ ಇದ್ದರೆ ಅದಕ್ಕೆ ಮಲ್ಟಿಪಾಯಿಂಟ್ ಟ್ಯಾಕ್ಸ್ ಅನ್ವಯಿಸುತ್ತದೆ. ಅಮೆಂಡ್‌ಮೆಂಟ್ 3ರ ಒಳಗೆ, 2 ಪರ್ಸೆಂಟ್ ಇದ್ದುದು ಮೂರು ಪರ್ಸೆಂಟ್ ಆಗಿದೆ. ಈ ಆರ್ಟಿಕಲ್ಲುಗಳಿಗೆ ಮಲ್ಟಿಪಾಯಿಂಟ್ 3 ಪರ್ಸೆಂಟ್ ಆಗಿದೆ. ಇದನ್ನು ವಿಚಾರಕ್ಕೆ ತೆಗೆದುಕೊಳ್ಳಬೇಕು. ಎರಡನೇ ಸ್ಪೇಟ್‌ನೊಳಗೆ ಇದೇ ಪ್ರಕಾರ ಇತ್ತು ಎಂದರೆ, ಮಾನ್ಯ ಮಂತ್ರಿಗಳು ಹೇಳಿದಂತೆ ಒಪ್ಪಬೇಕಾಗುತ್ತದೆ. ಎಲ್ಲಾ ಸ್ಟೇಟ್‌ನೊಳಗಿನ ಫೈನಾನ್ಸ್ ಮಿನಿಸ್ಟರ್ಸ್ ಕೂಡಿಕೊಂಡು ಈ ಪ್ರಕಾರ ಯೋಚನೆ ಮಾಡಿ ಒಪ್ಪಿಕೊಂಡಿದ್ದಾರೆ, ಮದ್ರಾಸ್‌ನವರು ಅದನ್ನು ಅನುಸರಿಸಿ ಅಲ್ಲ ಇಂತಹ ಒಂದು ಬಿಲ್ ಅಲ್ಲ ಆಗಿದೆ, ಇನ್ನು ಇತರರು ಆ ರೀತಿ ಬಿಲ್ಲನ್ನು ಮಾಡುವ ಸಂದರ್ಭದಲ್ಲಿ ಇದ್ದಾರೆ. ನೀವು ಭಾಷಣದಲ್ಲಿ ಹೇಳಿದ್ದೀರಿ. ಒಂದು ರಾಜ್ಯದೊಳಗೆ ಒಂದು ಆರ್ಟಿಕಲ್ಲಿಗೆ ಸೇಲ್ಸ್ ಟ್ಯಾಕ್ಸ್ ಹೆಚ್ಚು ಕಡಿಮೆ ಇತ್ತು ಎಂದರೆ, ಟ್ರೇಡ್ ಒಂದು ಕಡೆಯಿಂದ ಇನ್ನೊಂದು ಕಡೆಗೆ ಡೈವರ್ಟ್ ಆಗುತ್ತದೆ. ಇದು ಆಗಬಾರದು. ಈ ನೀತಿಯನ್ನು ಸೇಲ್ಸ್‌ಟ್ಯಾಕ್ಸ್ ಪ್ರಾಮುಖ್ಯವಾಗಿ ಅನುಸರಿಸತಕ್ಕದ್ದು. ಇದನ್ನು ಅನುಸರಿಸಿರುವುದು ನೂಕ್ತ ಎಂದು ಹೇಳಬೇಕು.

ಅವು ಯಾವ ಆರ್ಟಿಕಲ್ ಎನ್ನುವುದು ಇಲ್ಲಿ ಹೇಳಿಲ್ಲ. ಯಾವುದು ಒಂದು ಷೆಡ್ಯೂಲಿನ ಒಳಗೆ ಇಲ್ಲವೋ ಎಂದರೆ 2, 3, 4, ಈ ಮೂರು ಷೆಡ್ಯೂಲಿನ ಒಳಗೆ ಇಲ್ಲದಿದ್ದರೆ ಮತ್ತು ಎಕ್ಸೆಮ್‌ಟೆಡ್ ಲಿಸ್ಟ್‌ನಲ್ಲಿ ಇಲ್ಲದಿದ್ದರೆ, ಅದರಮೇಲೆ ಮಲ್ಟಿಪಾಯಿಂಟ್ ಟ್ಯಾಕ್ಸ್ ಹಾಕಬಹುದು ಎಂದು ಹೇಳಿದೆ. ರಿಜಿಸ್ಟರ್ಡ್ ಡೀಲರ್ ಡೆಫನೆಷನ್ ಬಹಳ ನೂಕ್ತವಾಗಿ ಮಾಡಿದ್ದಾರೆ. ಈ ಪ್ರಕಾರ ಡೆಫನೆಷನ್ ಮಾಡಲಿಕ್ಕೆ ಇರತಕ್ಕದ್ದು. ಅದು ಯಾವ ಕಾರಣದಿಂದ ಇರಲಲ್ಲವೋ ತಿಳಿಯದು. ಬಹಳ ನೂಕ್ತವಾಗಿ ಮಾಡಿದ್ದಾರೆ. ಒಂದು ಪರ್ಸೆಂಟ್ ರಿಬೇಟ್ ಕೊಡುತ್ತಾರೆ ಎನ್ನುವುದು ಸರಿ. ಈ ಬಗ್ಗೆ ನಲಹೆ ಮಾಡುತ್ತೇನೆ. ಏಕೆಂದರೆ ಮುಂದಿನ ಕ್ವಾರ್ಟರಿನಲ್ಲಿ ರಿಟರ್ನ್ಡ್ ಕೊಡಬೇಕು, ಹಣ ಲಾಕಪ್ ಆಗುವುದಿಲ್ಲ, ಮುಂದೆ ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್ ಇದೆ ಎಂದು ತಿಳಿದುಬಂದರೆ ಅದಕ್ಕೆ ಪರಿಹಾರ ಕೊಡುತ್ತೀರಾ? ಆ ಪ್ರಕಾರ ಮಾಡಿದರೆ ವ್ಯಾಪಾರನ್ಥರಿಗೆ ಅಥವಾ ಸೇಲ್ಸ್ ಟ್ಯಾಕ್ಸ್ ಎರಡೂ ಭಾಗ ಕೊಟ್ಟವರಿಗೆ ಸರಿಯಾಗುತ್ತದೆ. ಇದನ್ನು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ.

18 (ಎ) ಇರುವುದು ಬಹಳ ನೂಕ್ತವಾಗಿದೆ. ಎರಡನೆಯ ಷೆಡ್ಯೂಲಿನಲ್ಲಿರುವುದಕ್ಕೂ ಮತ್ತು ಉದ್ದೇಶ ಮತ್ತು ಕಾರಣಗಳ ವಿವರದಲ್ಲಿರುವುದಕ್ಕೂ ಸ್ವಲ್ಪ ಹೋಲಿಸಿದರೆ ಅನುಮಾನಕ್ಕೆ ಎಡೆ ಕೊಡುತ್ತದೆ. ಬರೇ ಸೇಕಡ ಅರ್ಧದಷ್ಟು ಹೆಚ್ಚಾಗುತ್ತದೆ. ಎಂಬ ಅರ್ಥವಿದ್ದರೂ ಎರಡನೆಯ ಷೆಡ್ಯೂಲಿನ ಪ್ರಕಾರ ಕೆಲವಕ್ಕೆ ಎರಡು ಪರ್ಸೆಂಟಾಗುತ್ತದೆ, ಮಲ್ಟಿ ಪಾಯಿಂಟ್ ಬೀಳುತ್ತದೆ. ಎರಡನೆಯ ಷೆಡ್ಯೂಲಿನಲ್ಲಿ 1,2,3,4,5,6,27,29,30,33,34 ಈ ಸೀರಿಯಲ್ ನಂಬರುಗಳಿಗೆ ಮಲ್ಟಿ ಪಾಯಿಂಟ್ ತೆರಿಗೆ ಬೀಳುತ್ತದೆ. ಓವಿಟ್ ಆಗಿದ್ದ ಮಾತ್ರಕ್ಕೆ ವಿನಾಯಿತಿ ಮಾಡಲ್ಪಟ್ಟಿದೆ ಎಂದು ಭಾವಿಸಬಾರದು. ಕೆಲವಕ್ಕೆ ನಿಜವಾಗಿಯೂ ಅವಶ್ಯಕತೆ ಇತ್ತು, ಅದರಂತೆ ಮಾಡಿದ್ದಾರೆ. ಕೆಲವು ಪದಾರ್ಥಗಳಿಗೆ ಸೇಕಡ 10ರಿಂದ 20ರವರಗೆ ಕೂಡ ತೆರಿಗೆ ಇದೆ.

Sri RAMAKRISHNA HEGDE.—All these items have been totally exempted because they have been brought under the purview of the Central Excise.

Sri K. P. GADAG.—That is not made clear in the body of the Bill. My impression is that if they are omitted, they are liable for multi-point sales tax. If that is not so, I have nothing to say.

ಕೆಲವು ಆರ್ಟಿಕಲ್ಸ್ ಓವಿಟ್ ಮಾಡಿರುವುದಕ್ಕೆ ಮಲ್ಟಿಪಾಯಿಂಟ್ ಬೀಳುತ್ತದೆ. ಮಲ್ಟಿ ಪಾಯಿಂಟ್ ತೆರಿಗೆ ಬೀಳುವುದಿಲ್ಲ, ಓವಿಟ್ ಆಗಿದೆ ಎಂದು ಹೇಳಿದರೆ ಅವರ ಬಗ್ಗೆ ನಾನು ಏನೂ ಹೇಳಬೇಕಾಗಿಲ್ಲ. ನಾಲ್ಕನೆಯ ಷೆಡ್ಯೂಲಿನಲ್ಲಿ ಡಿಕ್ಲೇರ್ಡ್ ಗುಡ್ಸ್ ವಿಚಾರದಲ್ಲಿ ಹೆಚ್ಚು ಬದಲಾವಣೆ ಇಲ್ಲ. 2 ಮತ್ತು 3ನೆಯ ಷೆಡ್ಯೂಲುಗಳಲ್ಲಿ ಮಲ್ಟಿಪಾಯಿಂಟ್ ಇಲ್ಲವಿದ್ದರೆ ಅದೊಂದು ರೀತಿಯಾಗುತ್ತದೆ. ಎರಡನೆಯ

(ಶ್ರೀ ಕೆ. ಪಿ. ಗದಗ್)

ಸ್ಟೇಟ್ ಈ ಪ್ರಕಾರ ಮಾಡಿದರೆ ಒಪ್ಪಿಕೊಳ್ಳಬೇಕು. ಇದನ್ನು ಪರಿಶೀಲಿಸಬೇಕು ಸೇಕದ. 10ರಿಂದ 20ರವರೆಗೆ ಮಲ್ಟ್ ಪಾಯಿಂಟ್ ಇದ್ದರೆ ಅದು ಅತಿಯಾಗುತ್ತದೆ ಎಂದು ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

†ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಈ ಬಿಲ್ಲನ್ನು ಈ ದಿವಸ ನಮ್ಮ ಕೈಗೆ ಕೊಟ್ಟಿರುವುದರಿಂದ ಹೆಚ್ಚು ಹೇಳುವುದಕ್ಕಾಗುವುದಿಲ್ಲ. ಆದರೆ ಪಂಚವಾರ್ಷಿಕ ಯೋಜನೆಗೆ ಹಣ ಬೇಕು, ತೆರಿಗೆ ಹಾಕುವುದು ಬೇಡವೆಂದರೆ ಬೇಗೆ ಎಂದು ಮಾನ್ಯ ಗದಗ್ ಸಾಹೇಬರು ಅಪ್ಪಣೆ ಕೊಟ್ಟರು. ನಾವು ಇದುವರೆಗೆ ಕೊಟ್ಟಿರುವ ನುಂಕವನ್ನು ನ್ಯಾಯವಾಗಿ ಉಪಯೋಗಿಸಿದ್ದಾರೆಯೇ? ಹಾಗೆ ಮಾಡಿದ್ದರೆ ಅಭಿವೃದ್ಧಿ ಕಾರ್ಯಗಳಿಗೆ ಎಷ್ಟೋ ಹಣ ಉಳಿಯುತ್ತಿತ್ತು ಎಂದು ವಿನಯದಿಂದ ಹೇಳುತ್ತೇನೆ. ಇದನ್ನು ತಾವು ಯೋಚನೆ ಮಾಡಬೇಕು. ಸರಿಯಾಗಿ ವಿತರಣೆಯಿಂದ ನಾವು ಕೊಟ್ಟ ಹಣವನ್ನು ಉಪಯೋಗಿಸಿದ್ದರೆ ಇಷ್ಟು ಕ್ಷಾಮ ಬರುತ್ತಲೇ ಇರಲಿಲ್ಲ. ಖೋಟಾ ನೋಟುಗಳೇನು ಬರುತ್ತಿವೆ ಅದರ ವಿಚಾರದಲ್ಲೇನು ಸರಕಾರ ಕ್ರಮ ಕೈಗೊಂಡಿದೆ? ಅದರ ಮೂಲವನ್ನು ಪತ್ತೆ ಮಾಡಿ ಖೋಟಾ ನೋಟುಗಳು ಚಲಾವಣೆಗೆ ಬರುವುದನ್ನು ತಡೆಗಟ್ಟಿದ್ದೀರಾ ಎಂಬುದನ್ನು ಗಮನಿಸಬೇಕಾಗಿದೆ.

ಮತ್ತೊಂದು, ಈಗಾಗಲೆ ನಮ್ಮ ಶ್ರೀಮತಿ ಇಂದಿರಾಗಾಂಧಿಯವರು ದೊಡ್ಡ ಮನಸ್ಸು ಮಾಡಿ ರಾಜೀನಾಮೆ ಕೊಟ್ಟಿದ್ದಾರೆ, ಇವತ್ತು ಅಥವಾ ನಾಳೆ ಶ್ರೀ ರಾಜಯ್ಯನವರು ರಾಜೀನಾಮೆ ಕೊಡುವವರಾಗಿದ್ದಾರೆ. ಆದರಿಂದ ಕೊಂಚ ಹಣ ಉಳಿಯುತ್ತದೆ. ನಿನ್ನೆ ಮೊನ್ನೆ ಮಾನ್ಯ ಸದಸ್ಯರು ಶ್ರೀ ರಾಜಯ್ಯನವರ ವಿಚಾರದಲ್ಲಿ ಕೆಲವು ಮಾತುಗಳನ್ನಾಡಿದ್ದಕ್ಕೋ ಏನೋ ಅವರು ಇಂದು ಸಭೆಗೆ ಬಂದಿಲ್ಲವೆಂದು ಕಾಣುತ್ತದೆ. ಮತ್ತು ನಿರುದ್ಯೋಗಿಗಳಾಗಿರುವ ಅನೇಕ ಪಾರ್ಲಮೆಂಟರಿ ಸೆಕ್ರೆಟರಿಗಳು ಮತ್ತು ಅನೇಕ ಉಪಮಂತ್ರಿಗಳು ಕೂಡ ಪಂಚವಾರ್ಷಿಕ ಯೋಜನೆಗೆ ಹಣ ಉಳಿಸಲು ದೇಶದ ಹಿತದೃಷ್ಟಿಯಿಂದ ರಾಜೀನಾಮೆ ಕೊಡಲು ಮುಂದೆ ಬಂದಿದ್ದಾರೆ. ನಾಲ್ಕೂವರೆ ವರ್ಷಗಳಿಂದ ಅವರು ದೇಶದಲ್ಲಿ ಪ್ರವಾಸಮಾಡಿ ದೇಶಾಭಿವೃದ್ಧಿ ಮಾಡಲು ಸಾಧ್ಯವಾಗದೆ ಮನಸೊಂದು ರಾಜೀನಾಮೆ ಕೊಡುವವರಾಗಿದ್ದಾರೆ, ಆದರಿಂದಲೂ ಸ್ವಲ್ಪ ಹಣ ಉಳಿತಾಯವಾಗುತ್ತದೆ. ಹಣ ಬರುವ ಆದಾಯದಲ್ಲಿ ಉಳಿಯದಿದ್ದರೆ ತೆರಿಗೆ ಹಾಕಬೇಕು, ಮೊದಲು ಉಳಿಸಲು ಪ್ರಯತ್ನ ಮಾಡಬೇಕು. ಈಗ ಹಣಕಾಸಿನ ಸಚಿವರು ತಾವು ಹೋದ ಕಡೆ ಕೂಲಿಗಾರರು ಮತ್ತು ಇತರರು ತೊಂದರೆ ಮಾಡಬಹುದೆಂದು ಪಾನನಿರೋಧವನ್ನು ನಡಿಲ ಮಾಡಿ ಸೇಂದಿ, ಶರಾಬು ಸರಬರಾಜು ಮಾಡುವುದಾಗಿ ಹೇಳಿ ಬಂದಿದ್ದಾರೆ. ಆಹಾರ ಪರಿಸ್ಥಿತಿ ಹದಗೆಟ್ಟು ಕ್ಷಾಮ ತಲೆದೋರಿ ಜನರಿಗೆ ತೊಂದರೆಯಾಗಿರುವುದರಿಂದ ಜನರು ಮಂತ್ರಿಗಳು ಪ್ರವಾಸ ಹೋದಾಗ ಕಲ್ಲು ಬೀರಬಹುದು ಅಥವಾ ಅ ವಿಧವಾದ ಕಾರ್ಯಕ್ಕೆ ಕೈಹಾಕಬಹುದು.

Mr. SPEAKER.—The House will now adjourn to meet to-morrow at One of the Clock.

The House adjourned at Six of the Clock to meet again at One of the Clock on Friday, the 4th February 1966.

WD 6093—GPB—500 — 21 2-1966